




ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ, ಅದೇ ವರ್ಷ ಕೇರಳದಲ್ಲಿ ನಡೆದಿದ್ದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಶೂಟಿಂಗ್‌ನ ವಿವಿಧ ವಿಭಾಗಗಳಲ್ಲಿ ಒಂಬತ್ತು ಚಿನ್ನದ ಪದಕಗಳ ಒಡತಿಯಾಗಿದ್ದರು. ವಿಶೇಷವೆಂದರೆ, ವಿಶ್ವಕಪ್‌ನಲ್ಲಿ ಹಲವು ಪದಕಗಳನ್ನು ಗೆದ್ದಿರುವ ಹೀನಾ ಸಿಧು ಅವರನ್ನು ಸೋಲಿಸಿ ಮನು ಭಾಕರ್ ದಾಖಲೆ ಬರೆದಿದ್ದರು. ಹೀನಾ ಅವರ 240.8 ಪಾಯಿಂಟ್ಸ್ ಹೊಡೆದು ಹಾಕಿ ಮನು 242.3 ಪಾಯಿಂಟ್ಸ್ ಪಡೆದುಕೊಂಡಿದ್ದರು.

ಮನು ಭಾಕರ್ ಅವರದ್ದು ನಿಖರ ಗುರಿ, ಏಕಾಗ್ರತೆ, ಸ್ಪಷ್ಟತೆಯ ಶೂಟಿಂಗ್. ಇದು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿಯೂ ಸಾಬೀತಾಗಿದೆ. 2018ರ ಕಾಮನ್‌ವೆಲ್ತ್ ಕ್ರೀಡಾಕೂಟದ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಅವರು ಒಟ್ಟು 400 ಅಂಕಗಳಿಗೆ 388 ಅಂಕ ಪಡೆದುಕೊಂಡಿದ್ದರು. ಫೈನಲ್‌ನಲ್ಲಿ 240.9 ಅಂಕ ಗಳಿಸುವ ಮೂಲಕ ಕ್ರೀಡಾಕೂಟದಲ್ಲಿ ಹೊಸ ದಾಖಲೆ ನಿರ್ಮಿಸಿದ್ದರು. ಅದೇ ವರ್ಷ ಯೂತ್ ಒಲಿಂಪಿಕ್ಸ್‌ನಲ್ಲಿ ದೇಶದ ಧ್ವಜಧಾರಿಯಾಗಿದ್ದಷ್ಟೇ ಅಲ್ಲದೆ, ಆ ಕ್ರೀಡಾಕೂಟದಲ್ಲಿ ಚಿನ್ನದ ಪದಕ 'ಶೂಟ್' ಮಾಡಿದ ದೇಶದ ಮೊದಲ ಮಹಿಳಾ ಶೂಟರ್ ಎನ್ನುವ ದಾಖಲೆ ಬರೆದರು.

ವಿವಿಧ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಇದುವರೆಗೂ 17 ಚಿನ್ನದ ಪದಕ, ನಾಲ್ಕು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಮನು ಭಾಕರ್ ಜಯಿಸಿದ್ದಾರೆ. ಹಿಂದಿನ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದರೂ ಪದಕದ ಕನಸು ಕೈಗೂಡಿರಲಿಲ್ಲ.

ವ್ಯಾಪಾರಿ ನೌಕಾಪಡೆಯಲ್ಲಿ ಮುಖ್ಯ ಎಂಜಿನಿಯರ್ ಆಗಿರುವ ರಾಮಕಿಶನ್ ಭಾಕರ್ ಹಾಗೂ ಪ್ರಾಚಾರ್ಯೆಯಾಗಿದ್ದ ಸುಮೇಧಾ ದಂಪತಿಯ ಪುತ್ರಿ ಮನು ಭಾಕರ್ ತನ್ನ 14ನೇ ವಯಸ್ಸಿನಲ್ಲಿ ದಿನಕ್ಕೆ ಐದು ಗಂಟೆಗಳ ತರಬೇತಿ ಪಡೆಯಲು 25 ಕಿ.ಮೀ. ಪ್ರಯಾಣ ಮಾಡಬೇಕಿತ್ತು. ಶಾಲಾ ಹಂತದಿಂದಲೇ ಬೇರೆ ಕ್ರೀಡೆಗಳ ಜೊತೆಗೆ ಶೂಟಿಂಗ್‌ನಲ್ಲಿಯೂ ತೋರಿದ ಅಪರಿಮಿತ ಆಸಕ್ತಿ ಈಗ ಒಲಿಂಪಿಕ್ಸ್ ಪದಕ ತಂದುಕೊಡಲು ಕಾರಣವಾಗಿದೆ.

ಬಾಕ್ಸಿಂಗ್, ಸ್ಕೇಟಿಂಗ್, ವಾಲಿಬಾಲ್, ಕುದುರೆ ಸವಾರಿ, ಸಮರಕಲೆ ಮತ್ತು ಟೆನಿಸ್‌ನಲ್ಲಿ ಮನು ಭಾಕರ್ 60ಕ್ಕೂ ಹೆಚ್ಚು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಜಯಿಸಿದ್ದಾರೆ. ಯೋಗವೂ ಅವರಿಗೆ ಅಚ್ಚುಮೆಚ್ಚು. ಶಾಲೆಯಲ್ಲಿ ವಾಲಿಬಾಲ್ ಆಡುವಾಗ ಕಣ್ಣಿಗೆ ಆದ ಗಾಯದಿಂದಾಗಿ ಸ್ವಲ್ಪ ಕಾಲ ಕ್ರೀಡೆಯಿಂದ ದೂರ ಉಳಿಯಬೇಕಾಯಿತು. ಛಲದಿಂದ ಕ್ರೀಡೆಯನ್ನೇ ಸಾಧನೆಗೆ ವೇದಿಕೆ ಮಾಡಿಕೊಂಡರು.

ಹಿಂದಿನ ಒಲಿಂಪಿಕ್ಸ್‌ನಲ್ಲಿ ಮನು ಅನುಭವಿಸಿದ ವೈಫಲ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಸಾಕಷ್ಟು ಟ್ರೋಲ್ ಆಯಿತು. ಪಿಸ್ತೂಲ್ ಅಸಮರ್ಪಕ ಕಾರ್ಯನಿರ್ವಹಣೆ ಇದಕ್ಕೆ ಪ್ರಮುಖ ಕಾರಣವಾಗಿತ್ತು. ಒಲಿಂಪಿಕ್ಸ್‌ನಂಥ ಪ್ರತಿಷ್ಠಿತ ಕ್ರೀಡಾಕೂಟದ ವೇಳೆ ಪಿಸ್ತೂಲ್ ಸರಿಯಾಗಿ ಕೆಲಸ ನಿರ್ವಹಿಸಲಿಲ್ಲ ಎನ್ನುವ ವಿಷಯವೇ ಮನು ಅವರನ್ನು ಮಾನಸಿಕವಾಗಿ ಕುಗ್ಗಿಸಿತ್ತು. ಆ ಕ್ರೀಡಾಕೂಟದ ಬಳಿಕ ಹಲವು ದಿನಗಳ ಕಾಲ ಅವರು ಪಿಸ್ತೂಲ್ ಕೂಡ ನೋಡಿರಲಿಲ್ಲವಂತೆ. ಇದು ಮನು ಹಾಗೂ ಅವರ ಕೋಚ್ ಜಸ್ಪಾಲ್ ರಾಣಾ ನಡುವಿನ ಕಂದಕಕ್ಕೂ ಕಾರಣವಾಗಿತ್ತು. ಪ್ಯಾರಿಸ್ ಒಲಿಂಪಿಕ್ಸ್ ವೇಳೆಗೆಲ್ಲ ಆಂತರಿಕ ಬಿಕ್ಕಟ್ಟು ಪರಿಹಾರವಾಗಿ ಈಗ ಎರಡು ಪದಕಗಳ ಹೊನಲು ಹರಿದಿದೆ.

ರಾಜ್ಯವರ್ಧನ್ ಸಿಂಗ್ ರಾಥೋಡ್, ಗಗನ್ ನಾರಂಗ್, ಅಭಿನವ್ ಬಿಂದ್ರಾ, ಜಿತು ರೈ, ವಿಜಯ ಕುಮಾರ್ – ಹೀಗೆ ಅನೇಕ ಹಿರಿಯ ಶೂಟರ್‌ಗಳು ಛಾಪು ಮೂಡಿಸಿರುವ ಕ್ರೀಡೆಯಲ್ಲಿ ಈಗ ಯುವ ಕ್ರೀಡಾಪಟುಗಳ ಯುಗ. ಈ ಬಾರಿ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ದಾಖಲೆಯ 21 ಭಾರತದ ಶೂಟರ್‌ಗಳು ಕಣದಲ್ಲಿದ್ದಾರೆ. ವರ್ಷದಿಂದ ವರ್ಷಕ್ಕೆ ಶೂಟರ್‌ಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಗಮನಾರ್ಹ.

ಮನು ಭಾಕರ್, ಒಲಿಂಪಿಕ್ಸ್‌ನ ಮಿಶ್ರ ತಂಡ ವಿಭಾಗದಲ್ಲಿ ಕಂಚು ಗೆದ್ದ ಸರೋಬ್ಜತ್ ಸಿಂಗ್, ಸಂದೀಪ್ ಸಿಂಗ್, ಅರ್ಜುನ್ ಬಬುತಾ, ಇಲವೇನಿಲ್ ವಲರಿವನ್, ರಮಿತಾ ಜಿಂದಾಲ್, ಅರ್ಜುನ್ ಚೀಮಾ, ರಿದಿಮ್ ಸಂಗ್ವಾನ್ ಹೀಗೆ ಯುವಪಡೆಯ ದಂಡು ಪ್ರವರ್ಧಮಾನಕ್ಕೆ ಬರುತ್ತಿದೆ. ಮುಂಬರುವ ಒಲಿಂಪಿಕ್ಸ್‌ನಲ್ಲಿ ಮತ್ತಷ್ಟು ಪದಕಗಳನ್ನು ಗೆಲ್ಲಲು ಈಗಲೇ ಬುನಾದಿಯೂ ಬಿದ್ದಿದೆ. ಇಂಥ ಮಹತ್ವದ ಸಮಯದಲ್ಲಿ ಮನು ಭಾಕರ್ ಗೆದ್ದ ಎರಡು ಕಂಚಿನ ಪದಕಗಳು ಭಾರತದ ಶೂಟಿಂಗ್ ವಲಯಕ್ಕೆ ಚಿನ್ನದಂತೆ ಗೋಚರಿಸುತ್ತಿವೆ.

ಪ್ರತಿಕ್ರಿಯಿಸಿ: feedback@sudha.co.in